314 ಶ್ರೀ ಮಹೇಶ್ ಎಸ್.ಆರ್. (ಕೃಷ್ಣರಾಜನಗರ)
ಕಂದಾಯ ಸಚಿವರು.

ಅ) ರಾಜ್ಯದಲ್ಲಿ ಸರ್ವೆಯರ್‌ಗಳ ಕೊರತೆಯಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

–ಹೌದು–

ಆ) ಹಾಗಿದ್ದಲ್ಲಿ, ಹೊಸದಾಗಿ ಸರ್ವೆಯರ್‌ಗಳನ್ನು ನೇಮಕಾತಿ ಮಾಡಿಕೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಈಗಾಗಲೇ 316 ಸರ್ವೆಯರ್‌ಗಳ ನೇಮಕ ಮಾಡಿಕೊಳ್ಳಲಾಗಿದೆ ಹಾಗೂ 400 ದ್ವಿತೀಯ ದರ್ಜೆ ಭೂಮಾಪಕರ ಹುದ್ದೆಗಳನ್ನು ಸೃಜಿಸಲಾಗಿದೆ ಹಾಗೂ ಇಲಾಖೆಯಲ್ಲಿ ಖಾಲಿ ಇದ್ದ 200 ದ್ವಿತೀಯ ದರ್ಜೆ ಭೂಮಾಪಕರ ಹುದ್ದೆಗಳನ್ನು ತುಂಬಲು ಅನುಮತಿಸಿದೆ.

ಇ) ರಾಜ್ಯ ಸರ್ಕಾರದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ರೆವಿನ್ಯೂ ಸರ್ವೆಯರ್‌ಗಳ ಸಂಖ್ಯೆ ಎಷ್ಟು; ಅಗತ್ಯಕ್ಕೆ ಅನುಗುಣವಾಗಿ ಸರ್ವೆಯರ್‌ಗಳ ಸಂಖ್ಯೆ ಇದೆಯೇ; ಹಾಗಿಲ್ಲದಿದ್ದಲ್ಲಿ, ಕಾರಣವೇನು;

ಹಾಲಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ
ಪ್ರಥಮ ದರ್ಜೆ ಭೂಮಾಪಕರ ಸಂಖ್ಯೆ : 205
ದ್ವಿತೀಯ ದರ್ಜೆ ಭೂಮಾಪಕರ ಸಂಖ್ಯೆ : 1784
ಸರ್ವೆಯರ್ ಸಂಖ್ಯೆ ಅಗತ್ಯಕ್ಕೆ ಅನುಗುಣವಾಗಿ ಇರುವುದಿಲ್ಲ. ಸಕಾಲದಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದು ಇದಕ್ಕೆ ಕಾರಣವಾಗಿರುತ್ತದೆ.

ಈ) ಸರ್ಕಾರವು ಪರವಾನಗಿ ನೀಡಿರುವ ಖಾಸಗಿ ಸರ್ವೆಯರ್‌ಗಳ ಸಂಖ್ಯೆ ಎಷ್ಟು; ಪರವಾನಗಿ ನೀಡಲು ನಿಗದಿಪಡಿಸಿರುವ ನಿಯಮಗಳಾವುವು;

ಪರವಾನಗಿ ನೀಡಿರುವ ಅರ್ಹ ಅಭ್ಯರ್ಥಿಗಳ ಸಂಖ್ಯೆ : 3145

ಪರವಾನಗಿ ಭೂಮಾಪಕರಾಗಿ ಕಾರ್ಯ ನಿರ್ವಹಿಸಲು ಕಾಯ್ದೆಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ಅಡಿಯಲ್ಲಿ ಕಲಂ 18,128 ಮತ್ತು 131 ಕ್ಕೆ ತಿದ್ದುಪಡಿ ತಂದು ಪರವಾನಗಿ ಭೂಮಾಪರುರ ಯೋಜನೆಯನ್ನು ರಾಜ್ಯದಾದ್ಯಂತ ಜಾರಿಗೊಳಿಸಲಾಗಿದೆ. ಇದಕ್ಕೆ ಪೂರಕವಾದ ನಿಯಮಗಳನ್ನು ಸಹಾ ಭೂಕಂದಾಯ ನಿಯಮಾವಳಿ 1966 ಕ್ಕೆ ತರಲಾಗಿದೆ. ನಿಯಮ 46 ರಲ್ಲಿ ತಿದ್ದುಪಡಿ ಮಾಡಿ 46(ಎ) ರಿಂದ 46(ಕೆ) ರವರೆಗೆ ಪರವಾನಗಿ ಭೂಮಾಪಕರ ಆಯ್ಕೆ, ತರಬೇತಿ, ಕಾರ್ಯವಿಧಾನ ಇತ್ಯಾದಿ ಬಗ್ಗೆ ವಿವರವಾದ ನಿಯಮಗಳನ್ನು ರೂಪಿಸಲಾಗಿದೆ.

ಉ) ಈ ಸರ್ವೆ ಕಾರ್ಯವನ್ನು ಮಾಡಲು ಆಧುನಿಕ ಉಪಕರಣಗಳನ್ನು ನೀಡಲು ಸರ್ಕಾರ ಚಿಂತನೆ ನಡೆಸಿದೆಯೇ;

–ಹೌದು–

ಊ) ಹಾಗಿದ್ದಲ್ಲಿ, ಈ ಉಪಕರಣಗಳನ್ನು ಪ್ರಸಕ್ತ ವರ್ಷದಲ್ಲಿ ಸರಬರಾಜು ಮಾಡಲಾಗುತ್ತಿದೆಯೇ: ಆಧುನಿಕ ಉಪಕರಣ ಬಳಕೆಯಿಂದ ಪ್ರತಿದಿನ ಎಷ್ಟು ಎಕರೆ ಜಮೀನನ್ನು ಸರ್ವೆ ಮಾಡಬಹುದು; ತಾಂತ್ರಿಕ ವಿವರಗಳನ್ನೊಳಗೊಂಡ ಮಾಹಿತಿ ನೀಡುವುದು)?

ಆಧುನಿಕ ಉಪಕರಣಗಳನ್ನು ಪ್ರಸಕ್ತ ಸಾಲಿನಲ್ಲಿಯೇ ಸರಬರಾಜು ಮಾಡಲು ಉದ್ದೇಶಿಸಲಾಗಿದೆ.

ಆಧುನಿಕ ಉಪಕರಣವಾದ ಎಲೆಕ್ಟ್ರಾನಿಕ್ ಟೋಟಲ್ ಸ್ಟೇಷನ್ (Electronic Total Station) ನಿಂದ ಬಯಲು ಪ್ರದೇಶದಲ್ಲಿ ಸುಮಾರು 200 ಎಕರೆ ಜಮೀನನ್ನು ಒಂದು ದಿನದಲ್ಲಿ ಅಳತೆ ಮಾಡಬಹುದಾಗಿರುತ್ತದೆ.

49 ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು)
ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು.

ಅ) ಕಳೆದ 3 ವರ್ಷಗಳಲ್ಲಿ ಸಿಂಧನೂರು ತಾಲ್ಲೂಕಿಗೆ ಮಂಜೂರಾಗಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು; ಸಂಪೂರ್ಣ ವಿವರಗಳನ್ನು ನೀಡುವುದು;

ಮೂರು ಏತ ನೀರಾವರಿ ಯೋಜನೆಗಳು ಮಂಜೂರಾಗಿವೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹಾಗಿದ್ದಲ್ಲಿ, ಮಂಜೂರಾಗಿರುವ ಏತ ನೀರಾವರಿಗಳ ಕಾಮಗಾರಿಗಳು ಪೂರ್ಣವಾಗಿವೆಯೇ;

ಪೂರ್ಣಗೊಂಡಿಲ್ಲ

ಇ) ಮಂಜೂರಾದ ಏತ ನೀರಾವರಿಗಳಿಗೆ ಸರ್ಕಾರದಿಂದ ನಿಗದಿಪಡಿಸಿರುವ ಅನುದಾನದ ಮೊತ್ತ ಎಷ್ಟು; ಯೋಜನಾವಾರು ಹಾಗೂ ವರ್ಷವಾರು ವಿವರಗಳನ್ನು ನೀಡುವುದು.

ಅನುಬಂಧದಲ್ಲಿ ನೀಡಲಾಗಿದೆ.

ಈ) ಈ ಯೋಜನೆಗಳ ಕಾಮಗಾರಿಗಳು ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಉ) ಹಾಗಿದ್ದಲ್ಲಿ, ಸದರಿ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು (ವಿವರಗಳನ್ನು ನೀಡುವುದು)?

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.